7.3.22 72

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಿ.ಎಂ. ಫಾರೂಖ್ ಇವರು ನಿಯಮ 72 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ವಿಷಯ: ಜಲಸಂಪನ್ಮೂಲ ಇಲಾಖೆಯ ವಿವಿಧ ನಿಗಮಗಳಲ್ಲಿ ಮುಂದುವರೆದ ಹಾಗೂ ಪೂರ್ಣಗೊಂಡ ಕಾಮಗಾರಿಗಳ ಬಿಲ್ಲಿನ ಮೊತ್ತವನ್ನು ಗುತ್ತಿಗೆದಾರರಿಗೆ ಪಾವತಿಸುವ ಬಗ್ಗೆ.**

******

ಜಲ ಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ)ಯಲ್ಲಿ ಆರ್ಥಿಕ ಸಂಪನ್ಮೂಲವನ್ನು ಸಂಗ್ರಹಿಸಿ ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವ ಉದ್ದೇಶದಿಂದ ಕಂಪನಿ ಕಾಯ್ದೆ 1956ರನ್ವಯ 4 ವಿಶೇಷ ಉದ್ದೇಶ ವಾಹಿನಿಗಳಾದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಹಾಗೂ ಕಾವೇರಿ ನೀರಾವರಿ ನಿಗಮ ನಿಯಮಿತಗಳನ್ನು ಸ್ಥಾಪಿಸಲಾಗಿದೆ.

2021-22ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಇಲಾಖೆಯ ನಾಲ್ಕು ನಿಗಮಗಳಿಗೆ ಒಟ್ಟು ರೂ.17410.28 ಕೋಟಿ ಅನುದಾನ (RE) ಹಂಚಿಕೆ ಮಾಡಲಾಗಿದ್ದು, ಜನವರಿ-2022ರ ಅಂತ್ಯಕ್ಕೆ ರೂ.10967.47 ಕೋಟಿ ಬಿಡುಗಡೆಯಾಗಿರುತ್ತದೆ. ಜನವರಿ-2022ರ ಅಂತ್ಯಕ್ಕೆ ನಿಗಮವಾರು ಬಿಡುಗಡೆ ಹಾಗೂ ವೆಚ್ಚದ ವಿವರ ಈ ಕೆಳಕಂಡಂತಿವೆ:

| ನಿಗಮ | ಅನುದಾನ (RE) | ಜನವರಿ-2022ರ ಅಂತ್ಯಕ್ಕೆ ಬಿಡುಗಡೆ | ಜನವರಿ-2022ರ ಅಂತ್ಯಕ್ಕೆ ವೆಚ್ಚ* |
|---|---|---|---|
| KBJNL | 5339.53 | 4109.39 | 4165.44 |
| KNNL | 5225.30 | 3841.57 | 3904.54 |
| VJNL | 4351.29 | 1275.91 | 1368.45 |
| CNNL | 2494.16 | 1740.60 | 1386.31 |
| **Total** | **17410.28** | **10967.47** | **10824.74** |

(*) ವೆಚ್ಚವು ಆರಂಭಿಕ ಮೊತ್ತವನ್ನು ಒಳಗೊಂಡಿರುತ್ತದೆ.

ಸದರಿ ನಿಗಮಗಳಡಿಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಸುಮಾರು ರೂ.1,00,000 ಕೋಟಿ ಅಗತ್ಯವಿರುತ್ತದೆ. ನಿಗಮಗಳಡಿಯಲ್ಲಿ ಮುಂದುವರೆದ/ಪೂರ್ಣಗೊಂಡಿರುವ ಕಾಮಗಾರಿಗಳಡಿಯಲ್ಲಿ ಪಾವತಿಗೆ ಬಾಕಿ ಇರುವ ಬಿಲ್ಲುಗಳ ಮೊತ್ತ ರೂ.9998.95 ಕೋಟಿ ಇದ್ದು, ನಿಗಮವಾರು ವಿವರ ಈ ಕೆಳಕಂಡಂತಿವೆ:

| ಕ್ರ. ಸಂ. | ನಿಗಮ | ಕಾಮಗಾರಿ |
|---|---|---|
| 1. | KBJNL | 1312.40 |
| 2 | KNNL | 4058.32 |
| 3 | CNNL | 1355.16 |
| 4 | VJNL | 3273.07 |
| | **Total** | **9998.95** |

ಇಲಾಖೆಗೆ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆವಾರು ಅನುದಾನ ಹಂಚಿಕೆ ಮಾಡಲಾಗಿದ್ದು, ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನವನ್ನು ನಿಗಮಗಳಲ್ಲಿ ಯೋಜನೆ/ಕಾಮಗಾರಿಗಳ ಅನುಷ್ಠಾನಕ್ಕಾಗಿ ಆದ್ಯತೆ ಅನುಸಾರ ವೆಚ್ಚ ಮಾಡಲು ಕ್ರಮವಹಿಸಲಾಗುತ್ತಿದೆ. ಯೋಜನೆ/ಕಾಮಗಾರಿವಾರು ಬಿಲ್ಲುಗಳನ್ನು ಪಾವತಿಸುವ ಸಂದರ್ಭದಲ್ಲಿ ನಿಗಮಗಳಡಿಯಲ್ಲಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಕ್ರಮ ವಹಿಸಲಾಗುತ್ತಿದೆ:

1. ಯೋಜನೆಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಿರುವ ಕಾಮಗಾರಿಗಳಿಗೆ ಆದ್ಯತೆ
2. ಒಟ್ಟಾರೆ ಯೋಜನಾವಾರು ಮತ್ತು ಲೆಕ್ಕ ಶೀರ್ಷಿಕೆವಾರು ಬಾಕಿ ಬಿಲ್ಲುಗಳ ಪರಿಗಣನೆ.
3. ಯೋಜನೆಗಳಡಿ ನೀರಾವರಿ ಸೃಜಿಸುವ ಕಾರ್ಯಕ್ರಮ.
4. ರಾಜ್ಯದ ನೀರಿನ ಹಂಚಿಕೆಯ ಬಳಕೆಯನ್ನು ವಿನಿಯೋಗಿಸಲು ಉದ್ದೇಶಿಸಿರುವ ಯೋಜನೆಗಳ ಪ್ರಗತಿಯನ್ನು ಸಾಧಿಸಲು ಅನುವಾಗುವಂತೆ ಕಾಮಗಾರಿಗಳಿಗೆ ಆದ್ಯತೆ.
5. ಕೇಂದ್ರ ಧನಸಹಾಯವನ್ನು ಪಡೆಯುವ ಯೋಜನೆಗಳಿಗೆ ಆದ್ಯತೆ ನೀಡಲಾಗುವುದು.
6. ಯೋಜನೆಗಳಿಗೆ ಸಂಬಂಧಿಸಿದಂತೆ, ಭೂಸ್ವಾಧೀನ, ಅರಣ್ಯ ತೀರುವಳಿ, ರೈಲು, ಹೆದ್ದಾರಿ, ಕೆಪಿಟಿಸಿಎಲ್ ಮುಂಗಡಗಳಿಗೆ ಆದ್ಯತೆ.
7. ಕುಡಿಯುವ ನೀರಿನ ಮತ್ತು ನೀರಿನ ಮರುಪೂರಣ ಮಾಡುವ ಯೋಜನೆಗಳು.
8. ಕೋರ್ಟ್ ಮತ್ತು ಇಪಿ ಕೇಸ್ ಗಳಿಗೆ ಅನುದಾನ ಬಿಡುಗಡೆ
9. ರೂ 50.00 ಲಕ್ಷಗಳ ಒಳಗೆ ಇರುವ ಸಣ್ಣ ಗುತ್ತಿಗೆದಾರರಿಗೆ ಆದ್ಯತೆ

ನಿಗಮಗಳಲ್ಲಿ ಅನುದಾನ ಲಭ್ಯತೆ ಮೇರೆಗೆ ಆದ್ಯತೆ ಮೇಲೆ ಕಾಮಗಾರಿ ಬಿಲ್ಲುಗಳನ್ನು ಹಂತ ಹಂತವಾಗಿ ಪಾವತಿಸಲು ಕ್ರಮ ಜರುಗಿಸಲಾಗುವುದು.

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು